

# ಅಲ್ಲವೇ ಅಲ್ಲ

ಸಭೆ ಸಮಾರಂಭಗಳಲ್ಲಿ ಎರಡೇ ಮಾತನಾಡುತ್ತೇನೆ ಎಂದು ಹೇಳಿ ತಾಸುಗಟ್ಟಲೆ ಭಾಷಣ ಮಾಡಿ ಬೋರ್ ಹೊಡೆಸುವವ ಭಾಷಣಕಾರ ಅಲ್ಲವೇ ಅಲ್ಲ.

★★★

ಬಸ್ಸಿನಲ್ಲಿ ಸುಂದರ ತರುಣಿಯ ಪಕ್ಕದಲ್ಲಿ ಕುಳಿತ ಪುರುಷ ನಿದ್ರಿಸುತ್ತಿದ್ದರೆ ಅದು ನಿದ್ದೆ ಅಲ್ಲವೇ ಅಲ್ಲ.

★★★

ರೋಗಿಯ ರೋಗಕ್ಕಿಂತ ಆತನ ಕಿಸೆ ತಪಾಸಿಸುವವರು ಡಾಕ್ಟರ್ ಅಲ್ಲವೇ ಅಲ್ಲ.

★★★

ಗಂಡಸರಿಗೆ ಕಣ್ಮುಚ್ಚಿ, ಮಹಿಳೆಯರಿಗೆ ಮೈಮುಟ್ಟಿ ಹರಸುವವರು ಸ್ವಾಮಿ ಅಲ್ಲವೇ ಅಲ್ಲ.

★★★

ಮನೆಯವರು ಪುಸ್ತಕ ಹಿಡಿಯೋ ಎಂದು ನೆನಪಿಸಿದಾಗಲಷ್ಟೇ ಪುಸ್ತಕ ಹಿಡಿಯುವವ ವಿದ್ಯಾರ್ಥಿ ಅಲ್ಲವೇ ಅಲ್ಲ.

–ದೇವಿದಾಸ ಸುವರ್ಣ, ಅಂಕೋಲಾ

★ಸಾಮಾನ್ಯ ವಿದ್ಯಾರ್ಥಿ, ವಿದ್ಯಾರ್ಥಿನಿಯ 'ಚರಿತ್ರೆ'ಗಿಂತ ಆಕೆಯ 'ಭೂಗೋಳ'ದ ಮೇಲೆಯೇ ಹೆಚ್ಚು ಆಸಕ್ತಿ ತಾಳಿರುತ್ತಾನೆ.

★★★

★ಮದುವೆಗೂ ಹುಚ್ಚಾಸ್ಪತ್ರೆಗೂ ಇರುವ ವ್ಯತ್ಯಾಸ?

ಹುಚ್ಚಾಸ್ಪತ್ರೆಯಿಂದ ನೀವು ಹೊರಬರಲು ಇಂಪ್ರೂವ್‌ಮೆಂಟ್ ತೋರಿಸಬೇಕು!

★★★

★ಪ್ರೇಮಿ (ತನ್ನ ಪ್ರೇಯಸಿಯೊಡನೆ) 'ನಿನಗೋಸ್ಕರ ನಾನು ನರಕಕ್ಕೆ ಹೋಗಬಲ್ಲೆ' ಎಂದು ಆಶ್ವಾಸನೆ ನೀಡಿದ.

ಆ ನಂತರ ಅವರಿಬ್ಬರ ಮದುವೆಯಾಯಿತು.

ಈಗಾತ ಇರುವುದು ಆ ನರಕದಲ್ಲೇ!

–ಎಸ್.ವಿಶ್ವನಾಥ, ಮಂಡ್ಯ

ಪ್ರೇಯಸಿ: ಬಾದಶಾಹ ಸುಲ್ತಾನನಿಗೆ ಒಂದು ಸಾವಿರ ಪತ್ನಿಯರಿದ್ದರಂತೆ!

ಇಷ್ಟು ಹೆಂಡತಿಯರಿಗೆಲ್ಲಾ ಆತ ಏನು ತಿನ್ನಿಸುತ್ತಿದ್ದನೋ ಕಾಣೆ!

ಪ್ರೇಮಿ: ಅದು ಅಂಥ ಅಚ್ಚರಿಯ ಮಾತಲ್ಲ. ಆ ಬುದ್ದು ಏನು ತಿಂತಿದ್ದ ಅನ್ನೋದೇ ಅಚ್ಚರಿಯ ಸಂಗತಿ!

★★★

'ನೀವು ಒಂದು ತಿಂಗಳು ರಜೆ ಹಾಕಿದ್ದೀರಲ್ಲಾ: ಎಲ್ಲಿ ಕಳೆದಿರಿ?'

'ಒಂದು ದಿನ ಕುದುರೆ ಸವಾರಿ ಮಾಡಿದೆ; ಉಳಿದ 29 ದಿವಸಗಳನ್ನು ಆಸ್ಪತ್ರೆಯಲ್ಲಿ ಕಳೆದೆ'!

–ಪೂರ್ಣಿಮಾ ಲಿಂಗರಾಜ್

ಮಧುಮೇಹಿಗಳೇ!
ನಿಮ್ಮ ಆರೋಗ್ಯದ ಕಾಳಜಿ ನಮ್ಮದು
ಯಸಾಕಾ
ನಿಮ್ಮ ಭರವಸೆಯ ರಕ್ಷಕ
- 12 ಅತ್ಯಮೂಲ್ಯ, ದೀರ್ಘ ಕಾಲ ಪರೀಕ್ಷಿಸಲ್ಪಟ್ಟ ದಿವ್ಯ ಗಿಡಮೂಲಿಕೆಗಳ ಸಂಯೋಜನೆ
- ಅಮೂಲ್ಯ ಅಂಗಗಳಾದ ಕಿಡ್ನಿ, ಕಣ್ಣು ಹಾಗೂ ನರಗಳಿಗೆ ಆಗುವ ಅಪಾಯ ತಪ್ಪಿಸುತ್ತದೆ.
- ಗಾಯಗಳನ್ನು ಗುಣಪಡಿಸುವ ಶಕ್ತಿಯ ವರ್ಧನೆ
- ಜೀರ್ಣ ಕ್ರಿಯೆಯನ್ನು ಚುರುಕುಗೊಳಿಸುತ್ತದೆ
- ಜೀವರಕ್ಷಕ – ರೋಗ ನಿರೋಧಕ ಶಕ್ತಿ ವರ್ಧನೆ
- ಪ್ಯಾನಕ್ರಿಯಾಸ್ ಗ್ರಂಥಿಯನ್ನು ಪ್ರಚೋದಿಸುತ್ತದೆ
- ಡಯಾಬಿಟಿಸ್‌ನ ಅಡ್ಡ ಪರಿಣಾಮಗಳಿಂದ ರಕ್ಷಣೆ
- ಸುಸ್ತನ್ನು ಹೋಗಲಾಡಿಸುವುದು
- ಶಕ್ತಿಭರಿತರನ್ನಾಗಿ ಕ್ರಿಯಾಶೀಲರನ್ನಾಗಿ ಇಡುವುದು.




ಎಲ್ಲ ಪ್ರಮುಖ ಮೆಡಿಕಲ್ಸ್ ಮತ್ತು ಆಯುರ್ವೇದಿಕ್ ಅಂಗಡಿಗಳಲ್ಲಿ ಲಭ್ಯ
HELP LINE: 9611688499